ಬುವಾಗೆ ವೆಂಕಟಸುಬ್ಬಯ್ಯ ಗಂಟು ಬಿದ್ದಿದ್ದ. ಯಾವ ಕರ್ಮದ ಫಲವೋ ಮನಸ್ಸು ಕರಗಿದ ಹೊತ್ತಿನಲ್ಲಿ ಆತನೂ ಒಪ್ಪಿದ. ಆ ಹೊತ್ತಿನಲ್ಲಿ ಇಡೀ ಭಾರತೀಯ ಸಂಗೀತವನ್ನು ಕುರಿತ ಜಿಜ್ಞಾಸೆಯೊಂದು ಗುರು-ಶಿಷ್ಯರ ನಡುವೆ ನಡೆಯುತ್ತದೆ. ಅದು ವಾಚ್ಯವಾಗಿದ್ದರೂ, ಭಾರತೀಯ ಸಂಗೀತ ಪರಂಪರೆಯ ದೃಷ್ಟಿಯಿಂದ ಇದೊಂದು ದಾಖಲಾಗಲೇ ಬೇಕಾದ ಜಿಜ್ಞಾಸೆ. ದೃಶ್ಯವಾಗಿ ಕೂಡ ಸಂಗೀತಮಯವಾಗಿ ರೂಪಿಸ ಬಹುದಾದ ಭಾವ-ಭಾಗ ಎಂಬುದು ನನ್ನ ನಮ್ರ ಅನಿಸಿಕೆ.

ಆ ಜಿಜ್ಞಾಸೆಯಲ್ಲಿ ಸಂಗೀತದ ಕಲಿಕೆಯ ಸಂದರ್ಭದಲ್ಲಿ ವೆಂಕಟಸುಬ್ಬಯ್ಯನಿಗೆ ತಂಬೂರಿ ಶ್ರುತಿ ಇದ್ದಿದ್ದರೆ ಎಂಬ ಬಯಕೆಯಾಗುತ್ತಿತ್ತು. ಅದಕ್ಕೆ ಸದಾನಂದ ಬುವಾ ಉತ್ತರ: "ತಂಬೂರಿ ಅದೇಕೆ ಬೇಕು? ನಾದದ ಶ್ರುತಿ ಹಿಡಿಯುವ ಯೋಗ್ಯತೆ ಇರುವವನಿಗೆ ಮಾತ್ರ ಆ ಬಹಿರಾವಲಂಬನ ಬೇಕು. ಕಣ್ಣಿಲ್ಲದವರಿಗೆ ಸುಲೋಚನದ ಅಗತ್ಯದಂತೆ. ರಾಗದ ನಾದದಲ್ಲಿ ಮೈಮರೆತಾಗ ನಿನ್ನ ಮೈಯೇ ತಂಬೂರಿಯಾಗಬೇಕು. ತ್ರಿಕರಣಗಳು ಶುದ್ಧಿಯಾಗಿ ತಂಬೂರಿಯ ಮೂರು ತಂತಿಗಳಂತೆ ಮಿಡಿಯಬೇಕು. ಆ ಪರವಶತೆ ಇಲ್ಲದಿದ್ದರೆ ಸಂಗೀತ ಬರುತ್ತೇನು?''

ಮುಂದುವರಿದು "ಅದಕ್ಕೆ ದ್ವೈತ ಬುದ್ಧಿ ತೊಲಗಬೇಕು. ಅದ್ವೈತ ಬುದ್ಧಿ ಸಾಧಿಸಬೇಕು. ಹಾಡು, ಹಾಡುವವನು ಬೇರೆ ಎಂಬ ಭಾವನೆ ತೊಲಗಬೇಕು. ಎರಡೂ ಒಂದಾಗಬೇಕು. ನಾನು-ನೀನು ಎಂಬ ದ್ವಂದ್ವ ಇರುವವರೆಗೆ ಜೀವನದಲ್ಲಿ ಸಾಮರಸ್ಯ ಹೇಗೆ ಸಾಧ್ಯವಿಲ್ಲವೋ, ಹಾಗೆಯೇ ಸಂಗೀತದಲ್ಲೂ. ಜೀವನದಲ್ಲಿ ಒಂದು ವೇಳೆ ದ್ವಂದ್ವ ಇದ್ದರೂ ನಡೆದೀತು. ಸಮರಸವೇ ಜೀವನವಾದ ಸಂಗೀತದಲ್ಲಿ ಅದು ಕೂಡಲೇ ಕೂಡದು. ತಲ್ಲೀನತೆಯೊಂದೇ ಸಂಗೀತದ ಸಿದ್ಧಗೆ ಹಾದಿ. ಹಾಡುತ್ತಿದ್ದೇನೆ ಎಂಬ ಅರಿವು ಹಾಡುತ್ತಿರುವಾಗ ಇರಬಾರದು.

ಇಲ್ಲಿ ಸಂಗೀತ ಶಾಸ್ತ್ರದ ಪ್ರಶ್ನೆಯೂ ಹುಟ್ಟುತ್ತದೆ. "ಶಾಸ್ತ್ರ, ಯಾರು ಮಾಡಿದ ಶಾಸ್ತ್ರ? ಹರಿವ ನೀರಿಗೆ, ಹಾಡುವ ಹಕ್ಕಿಗೆ ಶಾಸ್ತ್ರವಿರುತ್ತದೇನು? ಪ್ರತಿಭೆ ಇದ್ದವನು ಶಾಸ್ತ್ರ ಮರೆತು ಹಾಡಬಹುದು. ಕುಂದಣವಿಲ್ಲದೇ ವಜ್ರ ಹೊಳೆಯುವುದಿಲ್ಲವೇ?'' ಹೀಗೆ ಚರ್ಚೆ ಮುಂದುವರಿಯುತ್ತದೆ. ಉತ್ತರಾದಿ ಸಂಗೀತ, ದಕ್ಷಿಣಾದಿ ಸಂಗೀತವೆಂಬುದೇ ಇಲ್ಲ ಎನ್ನುವವರೆಗೆ ಈ ವಾದ ಜಿಜ್ಞಾಸೆ ಮುಂದುವರಿಯುತ್ತದೆ. ಈ ಭಾಗವನ್ನು ಓದುವಾಗ ತ.ರಾ.ಸು ಅವರಿಗಿರುವ ಅಪಾರವಾದ ಸಂಗೀತ, ಸಾಹಿತ್ಯ ಜ್ಞಾನ ಅವರಿಗರಿವಿಲ್ಲದಂತೆಯೇ ಕಿವಿಗೆ ಅಪ್ಪವಾಗಿ ಕೇಳಿಸುತ್ತದೆ. ಇಂದಿನ ಈ ಸಂದರ್ಭದಲ್ಲಿ ಇಂಥ ಒಂದು ನಾವು-ಅವರು (Us and Them) ಎಂಬ ಭಾವಕ್ಕೆ ರೂಪಕವಾಗಿ ಈ ಭಾಗ ಬಳಕೆಯಾಗುವುದಿಲ್ಲವೇ.. ಈ ಭಾಗದ ದೃಶ್ಯರೂಪ ಮತ್ತು ನಾದರೂಪ, ವೇದಬ್ರಹ್ಮ-ನಾದಬ್ರಹ್ಮನನ್ನು ಒಂದಾಗಿಸಿ 'ನಾದ ಬ್ರಹ್ಮನ ಓಂಕಾರನಾದ'ದಂತೆ ಕೇಳಿಸುವುದಿಲ್ಲವೇ?

ಕಾದಂಬರಿಯ ಮತ್ತೊಂದು ಮರೆತ ಸಂಗತಿ: ಗೋಪಾಲಾಚಾರ್ಯ ಕಥೆ ಹೇಳುವ ಪ್ರಸಂಗದಲ್ಲಿ "ಕೋಗಿಲೆ ಹಾಡು ಕೇಳ್ತೀಯಾ?" ಎನ್ನುವ ಮಾತು. ಅಪ್ಪನ ಒತ್ತಾಯಕ್ಕೆ ವೇದಶಾಲೆಗೆ ಹೋಗುವ ವೆಂಕಟಸುಬ್ಬಯ್ಯ ಕೋಗಿಲೆ ಹಾಡುತ್ತಿರುವುದನ್ನು ಕೇಳಿದಾಗ ಮೈ ಮರೆಯುತ್ತಿದ್ದನಂತೆ. ಆಗ ಪಾಠ ಹೇಳುತ್ತಿದ್ದ ಗೋಪಾಲಚಾರ್ಯರ ಪೂರ್ವಜ ಕಸ್ತೂರಿ ರಂಗಾಚಾರ್ಯರು, ವೆಂಕಟಸುಬ್ಬಯ್ಯನನ್ನ ಹುಣಿಸೇ ಬರಲಿನಲ್ಲಿ ಬಡಿದರಂತೆ. ಅಂದಿನಿಂದ ಯಾರಾದರೂ, ವೇದ ಪಾಠ ಕೇಳುವಾಗ ಅನ್ಯಮನಸ್ಕರಾದರೆ, "ಏನೋ ಕೋಗಿಲೆ ಹಾಡು ಕೇಳ್ತೀಯಾ" ಎಂಬ ಮಾತು ಎಲ್ಲ ಗುರುಗಳ ಬಾಯಲ್ಲೂ, ಅಮರಕೋಶದಂತೆ ಬಾಯಿಪಾಠವಾಯಿತಂತೆ.

ಸದ್ಯದ ಕನ್ನಡ ಚಿತ್ರರಂಗದ ಪರಿಸ್ಥಿತಿಯಲ್ಲಿ ಕನ್ನಡದ ಯಾವುದೇ ಚಿತ್ರ ನಿರ್ದೇಶಕರಿಗೆ ಈ 'ಕೋಗಿಲೆ ಹಾಡು ಕೇಳ್ತೀಯಾ' ಎಂದು ಕೇಳುವಂತಿಲ್ಲ. ಹಾಗೆಯೇ ಇಲ್ಲಿ ಬರೆದಿರುವ ಮಾತುಗಳೂ ಈ ಆಧುನಿಕ, ಆಧುನಿಕೋತ್ತರ ಹಾಗೂ ಮೆಟಾ-ಆಧುನಿಕೋತ್ತರ ಮಾರುಕಟ್ಟೆ ಜಗತ್ತಿನಲ್ಲಿ ಕೇಳಿಸುವ ಸಾಧ್ಯತೆ ಇಲ್ಲ.

ಅಯ್ಯರ್ ಬದುಕಿದ್ದರೆ ಅವರಿಗೆ 2017ಕ್ಕೆ ನೂರು ವರ್ಷ ತುಂಬುತ್ತಿತ್ತು. ಅವರ 'ಹಂಸಗೀತೆ' ಬಿಡುಗಡೆಯಾಗಿ ಈ ವರ್ಷಕ್ಕೆ ಐವತ್ತು ವರ್ಷವಂತೂ ಆಗಿಯೇ ಆಗಿದೆ. ಅವರ 'ಹಂಸಗೀತೆ' ಚಿತ್ರದುರ್ಗದ ಸಾಕ್ಷಿಕಲ್ಲಿನಂತೆ ನಮ್ಮ ಮುಂದಿದೆ.

●